# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **606** |
| ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಶರಾವತಿ ಭೂ ಅಂತರ್ಗತ ಜಲವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಅನುಮತಿ ನೀಡಿದೆಯೇ; ಇದರ ಯೋಜನಾ ವೆಚ್ಚ ಎಷ್ಟು; ಯೋಜನೆಯಿಂದ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗಲಿದೆ; (ಸಂಪೂರ್ಣ ವಿವರ ನೀಡುವುದು) | ಶರಾವತಿ ಭೂ ಅಂತರ್ಗತ ಜಲವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಆದೇಶ ಸಂಖ್ಯೆ: ಇಒ 47 ಪಿಪಿಟಿ 2017, ದಿನಾಂಕ: 07.12.2017 ರಂದು ಅನುಮತಿ ನೀಡಿದೆ. ಸದರಿ ಯೋಜನೆಗೆ ತಗಲುವ ವೆಚ್ಚ 9189.72 ಕೋಟಿಗಳು. ಸದರಿ ಯೋಜನೆಯಿಂದ ಸೋಲಾರ್ ಸಮಯದಲ್ಲಿ ಲಭ್ಯವಾಗುವ ಹೆಚ್ಚಿನ ವಿದ್ಯುತ್ತನ್ನು 2000 ಮೆ.ವ್ಯಾ ಪ್ರಮಾಣದಲ್ಲಿ 06 ಗಂಟೆಗಳ ಅವಧಿಗೆ ಸಂಗ್ರಹಿಸಿಕೊಂಡು ಗರಿಷ್ಠ ಬೇಡಿಕೆಯ (Peak Hours) ಸಂದರ್ಭದಲ್ಲಿ ಅಥವಾ ಗ್ರಿಡ್ ಅಗತ್ಯತೆಗೆ ಅನುಗುಣವಾಗಿ ಬಳಸಿಕೊಳ್ಳಬಹುದು. |
| ಆ) | ಯೋಜನೆಗೆ ಶರಾವತಿ ಕಣಿವೆ ವ್ಯಾಪ್ತಿಯ ಸಂಗಳೀಕ ಅಭಯಾರಣ್ಯ ಬಾಧಿತವಾಗುವ ಹಿನ್ನಲೆಯಲ್ಲಿ ಯೋಜನೆಗೆ ತೀವ್ರ ವಿರೋಧ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯೋಜನೆಗೆ ಅನುಮತಿ ನೀಡಲು ಕಾರಣಗಳೇನು; ಯೋಜನೆಯಿಂದಾಗುವ ಪರಿಣಾಮಗಳ ಕುರಿತು ಅಧ್ಯಯನ ಆಗಿದೆಯೇ; (ವರದಿಯ ಪ್ರತಿ ನೀಡುವುದು) | ಅಧ್ಯಯನ ಜಾರಿಯಲ್ಲಿದೆ. |
| ಇ) | ಯೋಜನೆಗೆ ಟೆಂಡರ್ ಕರೆಯಲಾಗಿದೆಯೇ: ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು ನಮೂದಿಸಿದ್ದ ಟೆಂಡರ್ ಮೊತ್ತ ಎಷ್ಟು: ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿದೆ: (ವಿವರ ನೀಡುವುದು) | ಯೋಜನೆಗೆ ಟೆಂಡರ್ ಕರೆಲಾಗಿದ್ದು ಈ ಕೆಳಕಂಡ ಸಂಸ್ಥೆಗಳು ಭಾಗವಹಿಸಿದ್ದು, ಅವುಗಳು ನಮೂದಿಸಿದ್ದ ಟೆಂಡರ್ ಮೊತ್ತ ಈ ಕೆಳಕಂಡಂತಿವೆ: |

| ಕ್ರ. ಸಂ | ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು | GST ಒಳಗೊಂಡಂತೆ ಉಲ್ಲೇಖಿಸಲಾದ ಬೆಲೆ ರೂ. ಕೋಟಿಗಳಲ್ಲಿ | ಶೇಖಡಾವಾರು ಅಂದಾಜು ವೆಚ್ಚಕ್ಕಿಂತ ಹೆಚ್ಚು | ಶ್ರೇಣಿ |
|---|---|---|---|---|
| 1 | ಮೇಘಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ | 9190 | 15 | L1 |
| 2 | ಜಿವಿಪಿಆರ್ ಇಂಜಿನಿಯರ್ಸ್ ಲಿಮಿಟೆಡ್ | 9406 | 18 | L2 |
| 3 | ಹಿಂದೂಸ್ತಾನ್ ಕಂಸ್ಟ್ರಕ್ಷನ್ ಲಿಮಿಟೆಡ್ | 9590 | 20 | L3 |

| | | |
|---|---|---|
| | | L1 ಬಿಡ್ಡುದಾರರಾದ ಮೆ: ಮೇಘಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರು ರೂ. 545.12 ಕೋಟಿಗಳ ರಿಯಾಯಿತಿಯನ್ನು ಕೊಟ್ಟಿದ್ದು ಟೆಂಡರ್ ಮೊತ್ತವನ್ನು ರೂ.8644.60 ಕೋಟಿಗಳಿಗೆ ಪರಿಷ್ಕರಿಸಿರುತ್ತಾರೆ. ಸದರಿ ಮೊತ್ತವು ಅಂದಾಜು ಮೊತ್ತಕ್ಕಿಂತ ಶೇ.7.99 ಹೆಚ್ಚಾಗಿರುತ್ತದೆ.<br><br>ಟೆಂಡರ್‌ನ್ನು ಮೆ: ಮೇಘಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆಗೆ 18.05.2024ರಂದು ನೀಡಲಾಗಿದೆ. |
| ಈ) | ಯೋಜನೆ ಜಾರಿಯಿಂದಾಗಿ ಶರಾವತಿ ನದಿ ಹರಿವಿನಲ್ಲಿ ಇಳಿಕೆಯಾಗುವ ಹಾಗೂ ಅಭಯಾರಣ್ಯ ಬಾಧಿತವಾಗುವ ಕಾರಣ ಯೋಜನೆಯನ್ನು ಕೈಬಿಡುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ? | ಯೋಜನೆಗೆ ಉಪಯೋಗಿಸುವ ನೀರು ಮರುಬಳಕೆಯಾಗುವುದರಿಂದ ಶರಾವತಿ ನದಿ ಹರಿವಿನಲ್ಲಿ ಇಳಿಕೆಯಾಗುವ ಪ್ರಮೇಯವಿರುವುದಿಲ್ಲ. ಅಭಯಾರಣ್ಯ ಬಾಧಿತವಾಗುವ ಕುರಿತು ಅಧ್ಯಯನ ಜಾರಿಯಲ್ಲಿದೆ. |

ಸಂಖ್ಯೆ: ಎನರ್ಜಿ 191 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು